# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 960

ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್.

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13-12-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರತಿ ದಿನ ಬೆಂಗಳೂರಿನಿಂದ ಮೇಲುಕೋಟೆಗೆ ಸಂಜೆ 06.15 ಗಂಟೆಗೆ ಹೊರಡುವ ಸರ್ಕಾರಿ ಬಸ್ ಸರಿಯಾದ ಸಮಯಕ್ಕೆ ಹೋಗದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು: | ಬೆಂಗಳೂರಿನಿಂದ ಮೇಲುಕೋಟೆಗೆ ಪಾಂಡವಪುರ ಘಟಕದ ಅನುಸೂಚಿ ಸಂಖ್ಯೆ 34/35 ಸಂಜೆ 6.15ಕ್ಕೆ ಕಾರ್ಯಾಚರಣೆಯಾಗುತ್ತಿದ್ದು, ಈ ಸಾರಿಗೆಯನ್ನು ಅಕ್ಟೋಬರ್-2023 ಮತ್ತು ನವೆಂಬರ್-2023ರ ಮಾಹೆಗಳಲ್ಲಿ ಮಹಾಲಯ ಅಮವಾಸ್ಯೆ, ದಸರಾ, ದೀಪಾವಳಿ ಪ್ರಯುಕ್ತ ಜಾತ್ರಾ ವಿಶೇಷ ಹಾಗೂ ಹೆಚ್ಚುವರಿ ಕಾರ್ಯಾಚರಣೆ ಮಾಡಿರುವುದರಿಂದ ಅನಿಯಮಿತವಾಗಿ ಕಾರ್ಯಾಚರಣೆಯಾಗಿರುತ್ತದೆ. ಆದಾಗ್ಯೂ, ಸಾರ್ವಜನಿಕ ಪ್ರಯಾಣಿಕರ ಮತ್ತು ಭಕ್ತಾಧಿಗಳ ಅನುಕೂಲಕ್ಕಾಗಿ ವಾರಾಂತ್ಯಗಳಲ್ಲಿ, ಸತತ ಸಾರ್ವತ್ರಿಕ ರಜಾ ದಿನಗಳಲ್ಲಿ, ಹಾಗೂ ಪ್ರಯಾಣಿಕರ ದಟ್ಟಣೆಗನುಗುಣವಾಗಿ ಸದರಿ ಸಾರಿಗೆಯನ್ನು ಮುಂದುವರೆಸಲಾಗಿರುತ್ತದೆ.<br><br>ಪ್ರಸ್ತುತ ಸದರಿ ಅನುಸೂಚಿಯನ್ನು ನಿಯಮಿತವಾಗಿ ಕಾರ್ಯಾಚರಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. |
| ಆ. | ಸದರಿ ಬಸ್ ತಿಂಗಳಲ್ಲಿ ಕೇವಲ 10 ರಿಂದ 15 ದಿನಗಳು ಮಾತ್ರ ಸಂಚರಿಸುತ್ತಿದ್ದು ಇದರಿಂದ ಪ್ರತಿ ದಿನ ಪ್ರಯಾಣ ಮಾಡುವ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು ಈ ಕುರಿತು ಬೆಂಗಳೂರಿನ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಹಾಗೂ ಕೆ.ಆರ್.ಪೇಟೆ ನಿಲ್ದಾಣದ ಅಧಿಕಾರಿಗಳನ್ನು ವಿಚಾರಿಸಲಾಗಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಮಾಹಿತಿ ನೀಡದೆ ಏಕವಚನದಲ್ಲಿ ಮಾತನಾಡುತ್ತಿರುವುದರಿಂದ ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; | ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಯಾಟ್‌ಲೈಟ್ ಬಸ್ ನಿಲ್ದಾಣ ಹಾಗೂ ಕೆ.ಆರ್.ಪೇಟೆ ಬಸ್ ನಿಲ್ದಾಣದ ಅಧಿಕಾರಿಗಳ ವಿರುದ್ಧ ಸಾರ್ವಜನಿಕ ಪ್ರಯಾಣಿಕರಿಂದ ಯಾವುದೇ ದೂರುಗಳನ್ನು ಸ್ವೀಕರಿಸಿರುವುದಿಲ್ಲ.<br><br>ಮಂಡ್ಯ-ಮೇಲುಕೋಟೆ ಮಾರ್ಗದಲ್ಲಿ ಬರುವ ನಿಗದಿತ ನಿಲುಗಡೆಗಳಲ್ಲಿ ನಿಲುಗಡೆ ನೀಡಿ ವಾಹನಗಳನ್ನು ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಲು ಚಾಲನಾ ಸಿಬ್ಬಂದಿಗಳಿಗೆ ಅಗತ್ಯ ಸೂಚನೆ ನೀಡಲಾಗಿದೆ. |

| | | |
|---|---|---|
| ಇ. | ಸದರಿ ಮಾರ್ಗದಲ್ಲಿ ಪ್ರತಿ ದಿನ ಪ್ರಯಾಣ ಮಾಡುವ ಪ್ರಯಾಣಿಕರು ಮಂಡ್ಯದಿಂದ ಮೇಲುಕೋಟೆಗೆ ಹೋಗುವ ಪ್ರಯಾಣಿಕರಾಗಿದ್ದು ಪ್ರಸ್ತುತ ಸದರಿ ಬಸ್ ಮೇಲುಕೋಟೆ ಹೋಬಳಿಯ ಕಾಡೇನಹಳ್ಳಿ ಹಾಗೂ ಕದಲಗೆರೆ ಗ್ರಾಮದಲ್ಲಿ ನಿಲ್ಲಿಸದೆ ಹೋಗುತ್ತಿದ್ದು ಇದರಿಂದ ಅಕ್ಕ ಪಕ್ಕದ ಹಳ್ಳಿಗಳಿಗೆ ಹೋಗುವ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಸಂಬಂಧಪಟ್ಟ ಚಾಲಕ ಹಾಗೂ ನಿರ್ವಾಹಕರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದೇ; | ದಿನಾಂಕ:03/07/2023ರಂದು ಮಂಡ್ಯ-ಮೇಲುಕೋಟೆ ಮಾರ್ಗದಲ್ಲಿ ಪ್ರಯಾಣಿಸುವಾಗ ಮಾರ್ಗ ಮಧ್ಯೆ ಬಸ್ ಎಲ್ಲೂ ನಿಲ್ಲಿಸಿಲ್ಲವೆಂದು ಸಾಮಾಜಿಕ ಜಾಲತಾಣದ ಮೂಲಕ ದೂರನ್ನು ಸ್ವೀಕರಿಸಲಾಗಿದ್ದು, ಈ ಸಂಬಂಧ ಚಾಲಕ ಮತ್ತು ನಿರ್ವಾಹಕರ ವಿರುದ್ಧ ಕ.ರಾ.ರ.ಸಾ.ನಿಗಮದ ನಿಯಮಾನುಸಾರ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ. |
| ಈ. | ಪ್ರತಿ ದಿನ ಬೆಂಗಳೂರಿನಿಂದ ಮೇಲುಕೋಟೆಗೆ ಸಂಜೆ 06.15 ಗಂಟೆಗೆ ಹೊರಟು ಬೆಳಿಗ್ಗೆ 4.15 ಗಂಟೆಗೆ ಹೊರಟು ಬೆಳಿಗ್ಗೆ 04.15 ಗಂಟೆಗೆ ಮೇಲುಕೋಟೆಯಿಂದ ಹೊರಡುವ ಬಸ್ ಕದಲಗೆರೆಯಲ್ಲಿ ನಿಲ್ಲಿಸದೆ ಜಕ್ಕನಹಳ್ಳಿಗೆ ಬರುತ್ತಿದ್ದು ಅಕ್ಕ ಪಕ್ಕದ ಹಳ್ಳಿಯ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಕದಲಗೆರೆಯಲ್ಲಿ ನಿಲ್ಲಿಸಲು ಅಧಿಕಾರಿಗಳಿಗೆ ಸೂಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ? | ಬೆಂಗಳೂರಿನಿಂದ ಮೇಲುಕೋಟೆಗೆ ಸಂಜೆ 6.15 ಕ್ಕೆ ಹೊರಟು ಮೇಲುಕೋಟೆಯಲ್ಲಿ ರಾತ್ರಿ ವಸತಿ ಮಾಡಿ ಬೆಳಿಗ್ಗೆ 4.15 ಕ್ಕೆ ಮೇಲುಕೋಟೆಯಿಂದ ಹೊರಡುವ ಬಸ್ ಕದಲಗೆರೆಯಲ್ಲಿ ಈಗಾಗಲೇ ನಿಲುಗಡೆ ನೀಡಲಾಗುತ್ತಿದೆ. ಅದಾಗ್ಯೂ ಈ ಬಗ್ಗೆ ಸದರಿ ಮಾರ್ಗದಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕ ಮತ್ತು ನಿರ್ವಾಹಕರಿಗೆ ಕದಲಗೆರೆಯಲ್ಲಿ ನಿಲುಗಡೆ ನೀಡಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಕಾರ್ಯಾಚರಣೆ ಮಾಡುವಂತೆ ಮತ್ತೊಮ್ಮೆ ಸೂಚನೆ ನೀಡಲಾಗಿದೆ. |

ಸಂಖ್ಯೆ: ಟಿಡಿ 226 ಟಿಸಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು